4|08|2018

I Sem B.Sc.
Kannada

# ಸಂತ ಜೋಸೆಫರ ಕಾಲೇಜು(ಸ್ವಾಯತ್ತ) ಬೆಂಗಳೂರು–27

**ಬಿ.ಎಸ್‌ಸಿ, ಮೊದಲನೇ ಸೆಮಿಸ್ಟರ್,(KAS-118) ಆಂತರಿಕ ಪರೀಕ್ಷೆ, ಆಗಸ್ಟ್–2018**

**ಸಮಯ:1 ಗಂಟೆ** | **ವಿಷಯ: ಕನ್ನಡ** | **ಅಂಕಗಳು:30**

*ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಗಳಿಗನುಸಾರವಾಗಿ ಉತ್ತರಿಸಿ.*

**I. ಯಾವುದಾದರೂ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ. 1X5=5**

1. ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ ಆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯನರಿತು ನೀ ಹರಿಯ ನೆನೆ ಮನುಜ

2. ಹಸುಗೂಸು ಹಸಿವಿಗೆ ತಾಳದಲೆ
ಅಳುತವೆ ರೊಟ್ಟಿ ಕೇಳಿ ಕೇಳೀ
ಹಡೆದ ಬಾಣಂತಿಗೆ ಅನ್ನವಿಲ್ಲದಲೆ
ಏರುತಾವೆ ಮುಂಗೈಗೆ ಬಳೀ

**II. ಯಾವುದಾದರೂ ಒಂದಕ್ಕೆ ಸಂದರ್ಭಸಹಿತ ವಿವರಿಸಿ. 1X5=5**

3. "ನಿಮ್ಮ ವಿಚಾರಗಳನ್ನು ಸ್ನೇಹಪರವಾಗಿ ಹಂಚಿಕೊಳ್ಳಿ"
4. "ಓಹೋ! ನಮ್ಮ ಹಕ್ಕಿ ಮರಿ ಮನೆ ನೆನಪು ಮಾಡಿಕೊಂಡು ಬಂದಿದೆ"

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿ 2X5=10**

5. ಕನಕದಾಸರು ತಮ್ಮ ಕೀರ್ತನೆಯಲ್ಲಿ ಕುಲವನ್ನು ಕುರಿತು ಹೇಗೆ ಪ್ರಶ್ನಿಸುತ್ತಾರೆ ?
6. ಕ್ಷಾಮ, ಬರಗಾಲ, ಹಸಿವು, ಇವುಗಳನ್ನು ಜನಪದ ಕಾವ್ಯದಲ್ಲಿ ಹೇಗೆ ತಿಳಿಸಲಾಗಿದೆ ?
7. ತಲೆಮಾರುಗಳ ನಡುವೆ ಅಂತರವೇರ್ಪಡಲು ಪ್ರಮುಖವಾದ ಕಾರಣಗಳೇನು ?

**IV. ಯಾವುದಾದರೂ ಒಂದು ಪ್ರಶ್ನೆಗೆ ವಿವರವಾದ ಉತ್ತರವನ್ನು ಬರೆಯಿರಿ. 1X10=10**

8. ಪರಿಸರದ ಬಗ್ಗೆ ಒಲವು, ಪಕ್ಷಿಸಂಕುಲದಲ್ಲಿ ಮನುಷ್ಯನ ಹಸ್ತಕ್ಷೇಪ ಕುರಿತಂತೆ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ವಿಶ್ಲೇಷಣೆ ಏನು ? ವಿವರಿಸಿ.
9. ದುರಾಸೆ, ಅಸಹಾಯಕತೆ, ಮಾನವಪರತೆಯ ಅಂಶಗಳನ್ನು 'ಒಂದು ಬಾಗಿಲು' ಕತೆಯಲ್ಲಿ ನೀವು ಹೇಗೆ ಗುರುತಿಸುವಿರಿ? ವಿವರಿಸಿ.